**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ನಿಯಮ-72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ**

**ಸೂಚನೆ:**

**"ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ಶ್ರೀ ವಸಿಷ್ಠ ಸೌಹಾರ್ದ ಸಹಕಾರ ನಿಯಮಿತಗಳಲ್ಲಿನ ಅವ್ಯವಹಾರ ಸಂಬಂಧ ಸಹಕಾರ ಬ್ಯಾಂಕ್‌ಗಳ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ಹಾಗೂ ಠೇವಣಿದಾರರಿಗೆ ಈವರೆಗೆ ನ್ಯಾಯ ಸಿಗದಿರುವ ಕುರಿತು ಮಾನ್ಯ ಸಹಕಾರ ಸಚಿವರನ್ನು ನಿಯಮ 72 ರಡಿಯಲ್ಲಿ ಗಮನ ಸೆಳೆಯಬಯಸುತ್ತೇನೆ."**

**ಉತ್ತರ:**

**ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿ. ಬೆಂಗಳೂರು**

- ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಈ ಬ್ಯಾಂಕ್ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ದಿನಾಂಕ:12-04-1999ರಲ್ಲಿ ನೋಂದಣಿಗೊಂಡಿದ್ದು, ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1949 ರಡಿಯಲ್ಲಿ ದಿನಾಂಕ:26-08-1999 ರಂದು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಬ್ಯಾಂಕಿಂಗ್ ಚಟುವಟಿಕೆ ಕೈಗೊಳ್ಳಲು ಪರವಾನಿಗೆ ಪಡೆದಿರುತ್ತದೆ.
- ಭಾರತೀಯ ರಿಸರ್ವ್ ಬ್ಯಾಂಕಿನವರು 2019 ರಲ್ಲಿ ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಬ್ಯಾಂಕಿನಲ್ಲಿ ವಂಚನೆ, ಅವ್ಯವಹಾರ, ಹಣ ದುರುಪಯೋಗವಾಗಿರುವುದು ಕಂಡು ಬಂದಿದೆ.
- ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ:10-01-2020 ರಂದು ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರ ಪ್ರಕರಣ 35ಎ ಅಡಿಯಲ್ಲಿ ಈ ಬ್ಯಾಂಕಿಗೆ ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ನಿರ್ಬಂಧಿಸಿ ಆದೇಶಿಸಿರುತ್ತದೆ.
- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 30(6) ರಡಿಯಲ್ಲಿ ಬ್ಯಾಂಕಿಗೆ ಆಡಳಿತಾಧಿಕಾರಿ ನೇಮಿಸಿದ್ದು, ನಂತರ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ನಿರ್ದೇಶನದ ಪ್ರಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಶ್ರೀ ಆರ್.ಅಶೋಕನ್ ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ ಬದಲಿಸಿದ್ದು ಅವರು ಆಡಳಿತಾಧಿಕಾರಿಯಾಗಿ ಮುಂದುವರೆದಿರುತ್ತಾರೆ.

**ಭಾರತೀಯ ರಿಸರ್ವ್ ಬ್ಯಾಂಕಿನವರು ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆಯನ್ನು 2019 ರಲ್ಲಿ ಕೈಗೊಂಡ ಸಂದರ್ಭದಲ್ಲಿ ಗಂಭೀರ ಸ್ವರೂಪದ ಲೋಪದೋಷಗಳು ಕಂಡು ಬಂದಿರುತ್ತವೆ. ಅವುಗಳ ಸ್ಥೂಲ ಅಂಶಗಳು ಕೆಳಕಂಡಂತಿರುತ್ತದೆ.**

- ಬ್ಯಾಂಕ್ ಕೃತ್ರಿಮ (Artificial) ಠೇವಣಾತಿ ಸೃಷ್ಟಿಸಿರುವುದು, ಠೇವಣಾತಿದಾರರು ನೈಜವಾಗಿ ಇಲ್ಲದಿದ್ದರೂ ಅನ್ಯರ ಹೆಸರಿನಲ್ಲಿ ಠೇವಣಾತಿ ಮಾಡಿರುವುದು.
- ರೂ.1544.43 ಕೋಟಿ ಸಾಲ ಪ್ರಕರಣಗಳಿಗೆ ಸಂಬಂಧಿಸಿದಂತೆ 1576 ಸಾಲದ ಖಾತೆಗಳಿಗೆ ದಾಖಲೆಗಳು ಇಲ್ಲದಿರುವುದು.
- ಸಾಲ ಮಂಜೂರಾತಿ ಪ್ರಾಧಿಕಾರ ಸಾಲವನ್ನು ಮಂಜೂರು ಮಾಡದಿದ್ದರೂ ಸಾಲದ ಹಣವನ್ನು ಬಿಡುಗಡೆ ಮಾಡಿರುವುದು.
- 24 ಮುಖ್ಯ ಫಲಾನುಭವಿಗಳಿಗೆ (ಸಾಲಗಾರರಿಗೆ) ರೂ. 892.85 ಕೋಟಿ ಸಾಲ ಮಂಜೂರು ಮಾಡಿ ಹಣ ದುರುಪಯೋಗ ಮಾಡಿರುವುದು.

- ಠೇವಣಾತಿ ಇಲ್ಲದಿದ್ದರೂ ಠೇವಣಾತಿ ಇದೆ ಎಂದು ಸಾಲ ಮಂಜೂರು ಮಾಡಿರುವುದು. ಈ ರೀತಿ ರೂ.409.11 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಠೇವಣಾತಿದಾರರ ಒಪ್ಪಿಗೆ ಅಥವಾ ಸಹಮತಿ ಇಲ್ಲದೇ ಒಪ್ಪಿಗೆ ನೀಡದವರ ಹೆಸರಿನಲ್ಲಿ ಠೇವಣಾತಿ ಸಾಲ ನೀಡಿರುವುದು.
- ಆದಾಯ ಗುರುತಿಸುವಿಕೆ-ಆಸ್ತಿ ವರ್ಗೀಕರಣ (Income Recognition and Asset Classification Norms) (IRAC-NORMS) ನಿಯಮಗಳನ್ನು ಪಾಲಿಸದೇ ಸ್ಪಷ್ಟವಾಗಿ ಕಾನೂನು ಉಲ್ಲಂಘನೆ ಮಾಡಿ ವಾಸ್ತವಾಂಶವನ್ನು ಮರೆಮಾಚಿರುವುದು.

**ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ವಿವರಗಳು:**

1. ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಬ್ಯಾಂಕಿನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರ ವಿರುದ್ಧ ಬಸವನಗುಡಿ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:37/2020 ಅಡಿ ಪ್ರಕರಣ ದಾಖಲಾಗಿರುತ್ತದೆ ಮತ್ತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.
2. ಬ್ಯಾಂಕಿನಲ್ಲಿ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಾಲ ಪಡೆದು ಮರು ಪಾವತಿ ಮಾಡದೇ ಇರುವ ಸಾಲಗಾರರು ಮತ್ತು ಬ್ಯಾಂಕಿನ ಅಧಿಕಾರಿ, ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟು 42 ಜನ ಆರೋಪಿಗಳನ್ನು ದಸ್ತಗಿರಿ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ.
3. ಆರೋಪಿತರು ಮತ್ತು ಅವರ ಅವಲಂಬಿತ ಸದಸ್ಯರ ಹೆಸರಿನಲ್ಲಿದ್ದ ಒಟ್ಟು 9548 ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ರೂ: 15 ಕೋಟಿಗೂ ಹೆಚ್ಚು ಹಣವನ್ನು ಫ್ರೀಜ್ ಮಾಡಲಾಗಿರುತ್ತದೆ. ತನಿಖೆಯಲ್ಲಿ ಆರೋಪಿತರು ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿದ್ದ ಸುಮಾರು ರೂ.1115.00/-ಕೋಟಿಗಿಂತ ಹೆಚ್ಚಿಗೆ ಬೆಲೆಬಾಳುವ ಸ್ಥಿರಾಸ್ತಿಗಳನ್ನು ಗುರುತಿಸಿ ಪ್ರಿವೆನ್ಷನ್ ಆಫ್ ಮನಿಲ್ಯಾಂಡ್ರಿಂಗ್ ಆಕ್ಟ್ ಅಡಿಯಲ್ಲಿ ಕ್ರಮ ಜರುಗಿಸಲು ಜಾರಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಲಾಗಿರುತ್ತದೆ.
4. ಈ ಬ್ಯಾಂಕಿನಲ್ಲಿ ಹೆಚ್ಚಿನ ಸಾಲ ಪಡೆದುಕೊಂಡು ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಜಶ್ವಂತ ರೆಡ್ಡಿ ಮತ್ತು ರಂಜಿತ್ ರೆಡ್ಡಿ ರವರ ವಿರುದ್ಧ ರೆಡ್ ಕಾರ್ನರ್ ಹೊರಡಿಸುವಂತೆ ಸಿಐಡಿಯವರು ಸಿಬಿಐಗೆ ಕೋರಿರುತ್ತಾರೆ.
5. ಬ್ಯಾಂಕಿನಲ್ಲಿ ಏಪ್ರಿಲ್ 2009 ನೇ ಸಾಲಿನಿಂದ ಜನವರಿ 2020ರ ಸಾಲಿನವರೆಗೆ ನಡೆದಿರುವ ಹಣಕಾಸಿನ ಅವ್ಯವಹಾರದ ಬಗ್ಗೆ ಮತ್ತು ಸುಳ್ಳು ಲಾಭ ನಷ್ಟದ ತಃಖ್ತೆಯ ಕುರಿತು ಮೆ.ಕೆನ್ & ಕಂಪನಿರವರು ಫಾರೆನ್ಸಿಕ್ ಆಡಿಟ್ ನಡೆಸುತ್ತಿದ್ದು, ಹಾಲಿ 2009-10 ನೇ ಸಾಲಿನ ಹಣಕಾಸಿನ ಅವ್ಯವಹಾರದ ಬಗ್ಗೆ ಆಡಿಟ್ ವರದಿಯನ್ನು ಸಲ್ಲಿಸಿದ್ದರ ಮೇರೆಗೆ ದಿನಾಂಕ:12-08-2021 ರಂದು ಮಾನ್ಯ 1ನೇ ಎ.ಸಿ.ಎಂ.ಎಂ. ನ್ಯಾಯಾಲಯ ಬೆಂಗಳೂರು ನಗರ 2009-10 ನೇ ಸಾಲಿನಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಟ್ಟು 28 ಜನ ಆರೋಪಿಗಳ ವಿರುದ್ಧ ಪ್ರಾಥಮಿಕ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಈ ದೋಷಾರೋಪಣಾ ಪಟ್ಟಿಯನ್ನು ಸಿ.ಸಿ.ನಂಬರ್: 28892/2021 ರಲ್ಲಿ ಅಂಗೀಕರಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.
6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆಯಲ್ಲಿ ಒಟ್ಟು 20 ಆರೋಪಗಳ ಬಗ್ಗೆ ವಿಚಾರಣೆ ನಡೆಸಲಾಗಿದೆ. ಪ್ರಕರಣ 64ರ ವಿಚಾರಣಾಧಿಕಾರಿಗಳು ವಿಚಾರಣೆ ಪೂರ್ಣಗೊಳಿಸಿ ದಿನಾಂಕ:08-02-2022 ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಬ್ಯಾಂಕಿಗೆ ದಿನಾಂಕ: 03-03-2022ರಂದು ಕಳುಹಿಸಿದ್ದು, ದಿನಾಂಕ: 21-05-2022ರಂದು ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿರುತ್ತದೆ. ದಿನಾಂಕ: 29-07-2022ರಂದು ಪ್ರಕರಣ 68ರಡಿ ನಿರ್ದೇಶನ ಹೊರಡಿಸಲಾಗಿದೆ.

7. ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿದ್ದ, ಬ್ಯಾಂಕಿನ 23 ಸಿಬ್ಬಂದಿ, 2 ನಿರ್ದೇಶಕರು ಹಾಗೂ 7 ಗ್ರಾಹಕರ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಯಲ್ಲಿ ದೂರನ್ನು ದಾಖಲಿಸಲಾಗಿದೆ.
8. 24 ಪ್ರಮುಖ ಸಾಲದ ಫಲಾನುಭವಿಗಳಲ್ಲಿ ಹೆಚ್ಚು ಸಾಲವನ್ನು ಪಡೆದ ಮೊದಲ 8 ಸಾಲಗಾರರ ಮಾಹಿತಿ ಹಾಗೂ ಲಭ್ಯವಿರುವ ದಾಖಲೆಗಳೊಂದಿಗೆ ತನಿಖಾ ವರದಿಯನ್ನು ಸಿ.ಐ.ಡಿ ಮತ್ತು ಈ.ಡಿ ಗೆ ಕಳುಹಿಸಿಕೊಡಲಾಗಿದೆ.
9. ಶ್ರೀ ರಾಮಕೃಷ್ಣ ಕೆ, ಮಾಜಿ ಅಧ್ಯಕ್ಷರು, ಶ್ರೀ ಜಿ ಕೃಷ್ಣನ್, ಮಾಜಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು, ಶ್ರೀ ಸಂತೋಷ್ ಕುಮಾರ್ ಎ, ಮಾಜಿ ಕಾರ್ಯನಿರ್ವಹಣಾಧಿಕಾರಿ ಮತ್ತು ಅವರ ಸಹಚರರಾದ ಶ್ರೀ ಸುಧೀರ್ ಬಾಬು ಟಿ, ಶ್ರೀ ಚೇತನ್ ಕುಮಾರ್ ಮತ್ತು ಶ್ರೀ ರಾಮಣ್ಣ ಈ ಇವರುಗಳ ವಂಚನೆಯ ಮಾಹಿತಿ ಹಾಗೂ ವರದಿಗಳನ್ನು ಸಿ.ಐ.ಡಿ ಮತ್ತು ಈ.ಡಿ ಸಂಸ್ಥೆಗೆ ನೀಡಲಾಗಿದೆ.
10. ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದ 19 ಸಿಬ್ಬಂದಿಗಳಿಗೆ ಬ್ಯಾಂಕಿನ ಸೇವಾ ನಿಯಮದಡಿಯಲ್ಲಿ ಆರೋಪ ಪಟ್ಟಿಯನ್ನು ನೀಡಲಾಗಿತ್ತು. ಈ ಎಲ್ಲಾ ಪ್ರಕರಣಗಳು ಮುಕ್ತಾಯಗೊಂಡಿದ್ದು, ಶಿಸ್ತು ಕ್ರಮವನ್ನು ಜರುಗಿಸಿ 19 ಸಿಬ್ಬಂದಿಗಳನ್ನು ವಜಾಗೊಳಿಸಲಾಗಿದೆ.
11. ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳ ತನಿಖೆಯಡಿಯಲ್ಲಿ ಬಂಧನಕ್ಕೊಳಗಾದ ಬ್ಯಾಂಕಿನ ಸಿಬ್ಬಂದಿಗಳ ಪಟ್ಟಿಯನ್ನು ಸಿ.ಐ.ಡಿ ತನಿಖಾ ಸಂಸ್ಥೆಯವರು ದಿನಾಂಕ 24-05-2022 ರಂದು ಬ್ಯಾಂಕಿಗೆ ಒದಗಿಸಿರುತ್ತಾರೆ. ಬ್ಯಾಂಕಿನ ಸೇವಾ ನಿಯಮ 8.5 ರಂತೆ ಬಂಧನಕ್ಕೊಳಗಾದ ಬ್ಯಾಂಕಿನ 10 ಸಿಬ್ಬಂದಿಗಳನ್ನು ಸದರಿಯವರ ಬಂಧನದ ದಿನಗಳಿಂದ ಅನ್ವಯವಾಗುವಂತೆ ಕರ್ತವ್ಯದಿಂದ ವಜಾಗೊಳಿಸಲಾಗಿದೆ.
12. ದಿನಾಂಕ:09-02-2022 ಮತ್ತು 17-08-2022 ರಂದು ಸಭೆ ನಡೆಸಿ, ಬ್ಯಾಂಕಿನಲ್ಲಿ ಅವ್ಯವಹಾರ ನಡೆಸಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಆಡಳಿತಾಧಿಕಾರಿಗಳು, ಸಿಐಡಿ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ ಸೂಚಿಸಲಾಗಿದೆ.

**ಠೇವಣಿದಾರರ ವಿವರಗಳು: -**

**ದಿನಾಂಕ:10-01-2020 ಕ್ಕೆ ಇದ್ದಂತೆ ಬ್ಯಾಂಕಿನ ಠೇವಣಿದಾರರು**

(ರೂ.ಕೋಟಿಗಳಲ್ಲಿ)

| ವ್ಯಕ್ತಿಗತ ಠೇವಣಿದಾರರು | | ಸಾಂಸ್ಥಿಕ ಠೇವಣಿದಾರರು | | ಒಟ್ಟು | |
|---|---|---|---|---|---|
| ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 40757 | 2061.30 | 1021 | 340.87 | 41778 | 2402.17 |

- ಈ ಪೈಕಿ 32868 ಠೇವಣಿದಾರರಿಗೆ ರೂ.969.72ಕೋಟಿಗಳು ಠೇವಣಿಯನ್ನು ಪಾವತಿಸಲಾಗಿರುತ್ತದೆ.
- ಉಳಿದ 8910 ಠೇವಣಿದಾರರಿಗೆ ರೂ.1432.45 ಕೋಟಿಗಳ ಠೇವಣಿ ಪಾವತಿಸಲು ಬಾಕಿ ಇರುತ್ತದೆ.
- ಈವರೆಗೂ ರೂ. 195.84 ಕೋಟಿ ಸಾಲ ವಸೂಲಾತಿಯನ್ನು ಮಾಡಲಾಗಿರುತ್ತದೆ.
- ಬ್ಯಾಂಕಿನ ಪುನರುಜ್ಜೀವನ ಮತ್ತು ಪುನಃಶ್ಚೇತನ ಕುರಿತು ಕೆಲವು ಹೂಡಿಕೆದಾರರು ಆಸಕ್ತಿ ತೋರಿಸುತ್ತಿದ್ದು, ಈ ಪೈಕಿ ಎರಡು E.O.I.ಪ್ರಸ್ತಾವನೆಯನ್ನು ಆರ್.ಬಿ.ಐ.ಗೆ ಅನುಮತಿಗಾಗಿ ಸಲ್ಲಿಸಲಾಗಿದೆ. ಆರ್.ಬಿ.ಐ.ನಿಂದ ಅನುಮತಿ ಪಡೆದ ನಂತರ ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

- ಶ್ರೀ ಗುರು ರಾಘವೇಂದ್ರ ಬ್ಯಾಂಕಿನ ಲೆಕ್ಕಪರಿಶೋಧನೆಯು 2020-21 ನೇ ಸಾಲಿಗೆ ಮುಕ್ತಾಯಗೊಂಡಿದ್ದು, ವರದಿ ಬಿಡುಗಡೆ ಮಾಡಲಾಗಿದೆ.

**ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಹನುಮಂತ ನಗರ, ಬೆಂಗಳೂರು.**

ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಹನುಮಂತ ನಗರ, ಬೆಂಗಳೂರು. ಇದರ ಪರಿವೀಕ್ಷಣೆಯನ್ನು ದಿನಾಂಕ:09-07-2021 ರಂದು ಸಂಯುಕ್ತ ಸಹಕಾರಿ ನಡೆಸಿದ ಸಂದರ್ಭದಲ್ಲಿ ಕಂಡು ಬಂದಂತಹ ಅವ್ಯವಹಾರಗಳನ್ನು ಗಮನಿಸಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು ಕಾಯ್ದೆ ಕಲಂ-25 ರಡಿಯಲ್ಲಿ ಅನರ್ಹಗೊಳಿಸಿ ಕಾಯ್ದೆ ಕಲಂ-38 'ಎ' ರ ಅವಕಾಶಗಳ ರೀತ್ಯ ವಿಶೇಷಾಧಿಕಾರಿಯನ್ನು ನೇಮಿಸಲಾಗಿರುತ್ತದೆ.ದಿನಾಂಕ:09-02-2022 ರಂದು ಸಭೆ ನಡೆಸಿ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1. ಸಹಕಾರಿಯ 2013-14ನೇ ಸಾಲಿನಿಂದ ಮರು ಲೆಕ್ಕ ಪರಿಶೋಧನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವುದು.
2. ಕಾಯ್ದೆ ಕಲಂ-35 ರಡಿಯಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದು.
3. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಿ ಅವರುಗಳು ಎಸಗಿರುವ ಕೃತ್ಯದ ಬಗ್ಗೆ ಪತ್ರಿಕ ಪ್ರಕಟಣೆ ನೀಡುವುದು.
4. ಲೋಪಕ್ಕೆ ಕಾರಣರಾದವರ ವಿರುದ್ಧ ವಿಚಾರಣೆಗೆ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದನ್ನು ತೆರವುಗೊಳಿಸುವುದು.
5. ಸಹಕಾರಿಯ ಹಿಂದಿನ ಆಡಳಿತ ಮಂಡಳಿಯ ಸದಸ್ಯರ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

ಮುಂದುವರೆದು ಮೇಲಿನಂತೆ ನೀಡಿದ ನಿರ್ದೇಶನಗಳ ಸಂಬಂಧ ಆಗಿರುವ ಪ್ರಗತಿಯನ್ನು ಪರಿಶೀಲಿಸಲು ಮತ್ತೊಮ್ಮೆ ದಿನಾಂಕ:17-08-2022 ರಂದು ಸಂಯುಕ್ತ ಸಹಕಾರಿಯನ್ನೊಳಗೊಂಡಂತೆ ವಿವಿಧ ಅಧಿಕಾರಿಗಳೊಡನೆ ಸಭೆ ನಡೆಸಲಾಗಿದೆ. ಸದರಿ ಸಭೆಯಲ್ಲಿ ಲೆಕ್ಕಪರಿಶೋಧನೆ ಇಲಾಖೆಯವರು 2013-14 ಮತ್ತು 2014-15ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿರುವುದಾಗಿ ಹಾಗೂ 2015-16 ರಿಂದ 2019-2020 ರವರೆಗೆ ಮರು ಲೆಕ್ಕಪರಿಶೋಧನೆಯನ್ನು ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ 2020-21 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಲಾಗುವುದೆಂದು ವರದಿಸಿರುತ್ತಾರೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಇವರು ಕಾಯ್ದೆ ಕಲಂ-35 ರಡಿ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ಪಡೆದು ಸದರಿ ವರದಿಯ ಮೇಲೆ ಕಾಯ್ದೆ ಕಲಂ 37ರ ನಿರ್ದೇಶನಗಳನ್ನು ವಿಶೇಷಾಧಿಕಾರಿಗೆ ಹೊರಡಿಸಿರುತ್ತಾರೆ. ತಪ್ಪಿತಸ್ಥರ ವಿರುದ್ಧ ಹನುಮಂತನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್.ಐ.ಆರ್.ಸಂಖ್ಯೆ:0061/2021ಕ್ಕೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಿ.ಆರ್.ಎಲ್.ಪಿ/4628/2021 ರಲ್ಲಿ ತಡೆಯಾಜ್ಞೆ ನೀಡಿದನ್ನು ಮಾನ್ಯ ನ್ಯಾಯಾಲಯವು ದಿನಾಂಕ:24-06-2022 ರಂದು ತೆರವುಗೊಳಿಸಿದ್ದು, ಅದರಂತೆ ತಪ್ಪಿತಸ್ಥರ ವಿರುದ್ಧ ಮುಂದಿನ ಕಠಿಣ ಕ್ರಮ ಕೈಗೊಳ್ಳಲು ಸಿ.ಐ.ಡಿ. ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹನುಮಂತನಗರ ಪೊಲೀಸ್ ಠಾಣೆಯಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರುಗಳು ಹಾಗೂ ಉದ್ದೇಶ ಪೂರ್ವಕ ಬಾಕಿ ಉಳಿಸಿಕೊಂಡ ಸಾಲಗಾರರ ವಿರುದ್ಧ ದಿನಾಂಕ:14-03-2022 ರಂದು ಮತ್ತೊಂದು ಎಫ್. ಐ.ಆರ್.ಸಂಖ್ಯೆ:0061/2022 ದಾಖಲಿಸಿದ್ದು ಪ್ರಕರಣ ಸಿ.ಐ.ಡಿಗೆ ವರ್ಗಾವಣೆಯಾಗಿ ವಿಚಾರಣೆ ನಡೆಯುತ್ತಿದೆ.

ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿಕೊಟ್ಟಿದ್ದು, ಸದರಿಯವರು ಕೆ.ಪಿ.ಐ.ಡಿ ಕಾಯ್ದೆಯ ಅವಕಾಶಗಳನ್ನು ಸಹಾ ಅನುಸರಿಸಿ ಠೇವಣಿದಾರರ ಹಿತ ಕಾಪಾಡಲು ಅನುಕೂಲವಾಗುವಂತೆ ಸಕ್ಷಮ ಪ್ರಾಧಿಕಾರಿಯನ್ನು ನೇಮಕ ಮಾಡುವಂತೆ ಕೋರಿ ಕ್ರಮ ಕೈಗೊಂಡಿರುತ್ತಾರೆ. ತಪ್ಪಿತಸ್ಥರ ವಿರುದ್ಧ ಈಗಾಗಲೇ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿರುತ್ತದೆ. ಠೇವಣಿದಾರರ ಹಿತ ಕಾಪಾಡಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.

**ಸಂಖ್ಯೆ: ಸಿಒ 97 ಸಿಆರ್‌ಸಿ 2022**

**(ಎಸ್.ಟಿ.ಸೋಮಶೇಖರ್)**

**ಸಹಕಾರ ಸಚಿವರು**